ಅಪಘಾತದ ನಂತರ ಆಸ್ಪತ್ರೆಗೆ ಸೇರಿಸಿದ್ದಾಗ ನನ್ನ ಪೋಷಕರು ಕೈಗಳ ಮರುಜೋಡಣೆ (ಹ್ಯಾಂಡ್ ಟ್ರಾನ್ಸ್‌ಪ್ಲಾಂಟ್) ಬಗ್ಗೆ ಪ್ರಸ್ತಾಪಿಸಿದ್ದರು. ದೇಶದಲ್ಲಿ ಮೂರು ಬಾರಿ ಇಂಥ ಶಸ್ತ್ರಚಿಕಿತ್ಸೆಗಳು ನಡೆದಿವೆ ಎಂದು ಹೇಳಿದ್ದರು. ಕೃತಕ ಕೈಗಳ ಬಗ್ಗೆ ನನಗಿದ್ದ ಬೇಸರವು ಕೈಗಳ ಮರುಜೋಡಣೆಯೇ ನನ್ನೆದುರಿನ ಅತ್ಯುತ್ತಮ ಆಯ್ಕೆ ಎನಿಸುವಂತೆ ಮಾಡಿತು. ಅಮ್ಮನ ಜೊತೆಗೆ ಕುಳಿತು, ಗೂಗಲ್‌ನಲ್ಲಿ ಕೈಗಳ ಮರುಜೋಡಣೆ ಬಗ್ಗೆ ಸಾಕಷ್ಟು ಓದಿಕೊಂಡೆ. ಅದರ ಉಪಯೋಗ, ಅಪಾಯಗಳ ಬಗ್ಗೆ ಅಧ್ಯಯನ ಮಾಡಿದೆವು.

ಕೆಲ ವೈದ್ಯರು 'ಇದು ಅತ್ಯಂತ ಕ್ಲಿಷ್ಟ ಶಸ್ತ್ರಚಿಕಿತ್ಸೆ. ವಿಫಲವಾಗುವ ಸಾಧ್ಯತೆಯೇ ಹೆಚ್ಚು. ಹೀಗಾಗಿ ರಿಸ್ಕ್ ತೆಗೆದುಕೊಳ್ಳಬೇಡಿ' ಎಂದು ಹೇಳಿ ನಮ್ಮ ಉತ್ಸಾಹಕ್ಕೆ ತಣ್ಣೀರೆರಚಿದ್ದರು. ಅವರು ಬಳಸುತ್ತಿದ್ದ ಪದಗಳು ಮತ್ತು ಅವರ ದೇಹಭಾಷೆ ಗಮನಿಸಿದಾಗ 'ಇವಳು ಮುಂದಿನ ದಿನಗಳಲ್ಲಿ ನಾಲ್ಕು ಗೋಡೆಗೆ ಸೀಮಿತಳಾಗಿರಬೇಕು. ಮರದ ಕೈಗಳನ್ನು ಬಳಸಬೇಕು' ಎನ್ನುವ ಮನಸ್ಥಿತಿಯಲ್ಲಿ ಅವರು ಮಾತನಾಡುತ್ತಿದ್ದಾರೆ ಎನಿಸಿತು. ಆದರೆ ಇಂಥ ಯಾವ ಮಾತುಗಳಿಗೂ ನನ್ನ ಉತ್ಸಾಹ ಕುಂದಿಸುವ ಶಕ್ತಿಯಿರಲಿಲ್ಲ.

ಇಂಥ ಶಸ್ತ್ರಚಿಕಿತ್ಸೆಗಳನ್ನು ನಡೆಸುವಾಗ ರೋಗ ನಿರೋಧಕ ಶಕ್ತಿಯನ್ನು ಕುಗ್ಗಿಸುವ ಇಮ್ಯುನೊಸಪ್ರೆಸೆಂಟ್ ಔಷಧಗಳನ್ನು ಕೊಡುತ್ತಾರೆ. ಅವುಗಳಿಂದ ತೀವ್ರತರವಾದ ಅಡ್ಡಪರಿಣಾಮಗಳು ಉಂಟಾಗುತ್ತವೆ. ಅದರ ಪರಿಣಾಮಗಳನ್ನು ಜೀವಮಾನವಿಡೀ ಎದುರಿಸಬೇಕಾಗುತ್ತದೆ ಎಂಬುದು ನನಗೆ ಅರಿವಾಗಿತ್ತು. ದೇಹದ ಇತರ ಅಂಗಗಳ ಮರುಜೋಡಣೆ ಶಸ್ತ್ರಚಿಕಿತ್ಸೆಗೂ ಕೈಗಳ ಮರುಜೋಡಣೆಗೂ ವ್ಯತ್ಯಾಸವಿದೆ. ಕೈಗಳ ಮರುಜೋಡಣೆ ಶಸ್ತ್ರಚಿಕಿತ್ಸೆಗೆ ಒಳಗಾಗುವವರು ಹೊಸ ಕೈಗಳನ್ನು ಬಳಸಲು ಆರಂಭಿಸುವುದು ಶಸ್ತ್ರಚಿಕಿತ್ಸೆಯ ಯಶಸ್ಸನ್ನು ಮತ್ತು ವೈದ್ಯರ ಸಾಮರ್ಥ್ಯವನ್ನು ಬಹುಪಾಲು ಅವಲಂಬಿಸಿರುತ್ತದೆ.

ಆಗಸ್ಟ್ 5, 2017ರಂದು ನಾವು ಕೊಚ್ಚಿನ್‌ಗೆ ಹೋಗಿ ಡಾ.ಸುಬ್ರಹ್ಮಣ್ಣ ಅಯ್ಯರ್ ಅವರನ್ನು ಭೇಟಿಯಾದೆವು. ಅಯ್ಯರ್ ಮತ್ತು ಅವರ ತಂಡ ಹಸ್ತ ಮರುಜೋಡಣೆಯ ಹಲವು ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ನೆರವೇರಿಸಿದೆ. ಅವರು ನನ್ನ ಹೆಸರನ್ನು ಕೇರಳದ ಅಂಗಾಂಗ ದಾನದ ವೆಬ್‌ಸೈಟ್‌ನಲ್ಲಿ ದಾಖಲಿಸಿದರು.

ಹಸ್ತ ಮರುಜೋಡಣೆಯ ಪ್ರಕ್ರಿಯೆಗಳನ್ನು ತಿಳಿಯಲೆಂದು ಡಾ. ಅಯ್ಯರ್ ಅವರನ್ನು ಈ ಹಿಂದೆಯೂ ಎರಡು ಬಾರಿ ಭೇಟಿಯಾಗಿದ್ದೆ. ಕೆಲ ಪರೀಕ್ಷೆಗಳು ಮತ್ತು ಆಪ್ತಸಮಾಲೋಚನೆಗಳ ನಂತರ ನಾನು ನಿರೀಕ್ಷಿಸುತ್ತಿದ್ದ ದಿನವೂ ಬಂತು. ಕೇರಳದಲ್ಲಿ ದೇಹದ ಒಳ ಅಂಗಾಂಗಗಳ ದಾನದ ಬಗ್ಗೆ ಸಾಕಷ್ಟು ಜಾಗೃತಿ ಮೂಡಿತ್ತು. ಆದರೆ ಸಾಂಸ್ಕೃತಿಕ ಕಾರಣಗಳಿಂದಾಗಿ ಹೊರ ಅಂಗಾಂಗಗಳನ್ನು ದಾನವಾಗಿ ನೀಡಲು ಜನರು ಹಿಂಜರಿಯುತ್ತಿದ್ದರು. ಅದೃಷ್ಟವಶಾತ್ ನಾನು ನೋಂದಣಿ ಮಾಡಿಸಿಕೊಂಡ ದಿನವೇ ನನಗೆ ಕೈಗಳು ದಾನವಾಗಿ ದೊರೆತವು. ಪುರುಷನ ಕೈಗಳನ್ನು ಜೋಡಿಸಿಕೊಳ್ಳಲು ಏನಾದರೂ ಹಿಂಜರಿಕೆಯಿದೆಯೇ ಎಂದು ಡಾ. ಅಯ್ಯರ್ ಅವರು ನನ್ನನ್ನು ಪ್ರಶ್ನಿಸಿದ್ದರು. ನಾನು ಮರು ಯೋಚನೆಯೇ ಇಲ್ಲದೆ 'ಇಲ್ಲ' ಎಂದು ಉತ್ತರಿಸಿದ್ದೆ.

9ನೇ ಆಗಸ್ಟ್ 2017ರಂದು ಸತತ 14 ಗಂಟೆಗಳ ಶಸ್ತ್ರಚಿಕಿತ್ಸೆಯ ನಂತರ ಏಷ್ಯಾದಲ್ಲಿ ಮೊದಲ ಬಾರಿಗೆ ಹಸ್ತಗಳ ಜೋಡಣೆ ಮಾಡಿಸಿಕೊಂಡ ಯುವತಿ ನಾನಾಗಿದ್ದೆ. ಜಗತ್ತಿನಲ್ಲಿ ಮೊದಲ ಬಾರಿಗೆ ಮಹಿಳೆಗೆ ಪುರುಷನ ಕೈಗಳನ್ನು ಜೋಡಿಸಿದ್ದು ಸಹ ಅದೇ ಮೊದಲು. 10ನೇ ಆಗಸ್ಟ್‌ನ ಮುಂಜಾನೆ, ಅಂದರೆ ಕೈಗಳೇ ಇಲ್ಲದೆ ಒಂದಿಡಿ ವರ್ಷ ಕಳೆದ ನಂತರ ನನ್ನ ದೇಹ ಮತ್ತೊಮ್ಮೆ ಪರಿಪೂರ್ಣ ಎನಿಸಿತ್ತು.



ಶಸ್ತ್ರಚಿಕಿತ್ಸೆ ಮೂಲಕ ಗಂಡಿನ ಕೈಗಳನ್ನು ಜೋಡಿಸಿಕೊಂಡ ಶ್ರೇಯಾ ಸಿದ್ದನಗೌಡರ್

ಅಂದು ನನಗೆಷ್ಟು ಖುಷಿಯಾಗಿತ್ತು ಎಂದು ಹೇಳಲು ಪದಗಳೇ ಸಾಲುತ್ತಿಲ್ಲ. ನನಗೆ ಹಸ್ತಗಳನ್ನು ದಾನವಾಗಿ ಕೊಟ್ಟ ಸಚಿನ್ ಮತ್ತು ಅವರ ಪೋಷಕರಿಗೆ ನಾನು ಎಷ್ಟು ಆಭಾರಿ ಎಂಬುದನ್ನು ವರ್ಣಿಸಲು ಆಗುವುದಿಲ್ಲ. ನಾನು ಸಚಿನ್‌ರ ಪೋಷಕರನ್ನು ಹಲವು ಬಾರಿ ಭೇಟಿಯಾಗಿದ್ದೇನೆ. ಅವರು ತಮ್ಮ ಮಗನ ಬಹುತೇಕ ಅಂಗಗಳನ್ನು ಸ್ವಯಂಪ್ರೇರಿತರಾಗಿ ದಾನ ಕೊಟ್ಟಿದ್ದಾಗಿ ಹೇಳಿದರು. ಹೀಗೆ ದಾನವನ್ನು ಪಡೆದ 6 ಜನರಲ್ಲಿ ಸಚಿನ್ ಇಂದಿಗೂ ಜೀವಂತ ಇದ್ದಾರೆ. ಸಚಿನ್ ಮತ್ತು ಅವರ ಪೋಷಕರು ನನ್ನ ಪ್ರಾರ್ಥನೆಗಳಲ್ಲಿ ಸದಾ ಸ್ಥಾನ ಪಡೆದಿದ್ದಾರೆ.

ಹಸ್ತಗಳ ಮರುಜೋಡಣೆ ನಡೆದು ಸುಮಾರು 18 ತಿಂಗಳುಗಳಾಗಿವೆ. ಇದರಿಂದ ನನ್ನ ಬದುಕು ಅದೆಷ್ಟು ಬದಲಾಗಿದೆ ಎಂಬುದು ನನಗೆ ಮಾತ್ರ ಗೊತ್ತು. ನನಗೆ ಗೊತ್ತು, ಇದೇನು ಜೀವ ಉಳಿಸುವ ಶಸ್ತ್ರಚಿಕಿತ್ಸೆ ಅಲ್ಲ. ಆದರೆ ಬದುಕು ಬದಲಿಸುವ, ಬದಲಿಸಿದ ಶಸ್ತ್ರಚಿಕಿತ್ಸೆ. ನಾನು ಇಂದು ಬಹುತೇಕ ಕೆಲಸಗಳನ್ನು ಬೇರೆಯವರ ನೆರವಿಲ್ಲದೆ ಮಾಡಬಲ್ಲೆ. ನನಗೆ ಅದು ದೊಡ್ಡ ಆತ್ಮವಿಶ್ವಾಸವನ್ನು ಕೊಟ್ಟಿದೆ. ಇದು ನನ್ನ ಬದುಕನ್ನು ಅದೆಷ್ಟರಮಟ್ಟಿಗೆ ಬದಲಿಸಿತು ಎಂಬುದರ ಸಂಪೂರ್ಣ ಅರಿವು ನನಗಿದೆ. ದುಃಖದಲ್ಲಿ ಮುಳುಗಿದ್ದ ಸಚಿನ್‌ರ ಪೋಷಕರು ಮಗನ ಅಂಗಾಂಗ ದಾನದ ಮೂಲಕ ಮಾನವೀಯತೆ ಮೆರೆದರು. ನನ್ನ ಉಸಿರಿರುವ ತನಕ ಅವರಿಗೆ ನಾನು ಆಭಾರಿಯಾಗಿರುತ್ತೇನೆ.

ನಾನು ಮತ್ತೊಮ್ಮೆ ಸ್ವತಂತ್ರಳಾಗಿ ಬದುಕುವುದನ್ನು ಸಾಕಾರಗೊಳಿಸಲು ಹಲವು ವೈದ್ಯರು, ಥೆರಪಿಸ್ಟ್‌ಗಳು, ನರ್ಸ್‌ಗಳು ಮತ್ತು ಇತರ ವೈದ್ಯಕೀಯ ಸಿಬ್ಬಂದಿ ಸತತವಾಗಿ ಶ್ರಮಿಸಿದರು. ನನ್ನ ಬದುಕಿನ ಪಯಣದಲ್ಲಿ ಜೊತೆಗಾರರಾದ ಅವರ ಬಗ್ಗೆಯೂ ನನ್ನಲ್ಲಿ ಕೃತಜ್ಞತೆ ಇದೆ. ಕಳೆದ ಎರಡು ವರ್ಷಗಳಲ್ಲಿ ನಾನು ಸಾಕಷ್ಟು ಬೆಳೆದೆ ಮತ್ತು ಕಳೆದುಕೊಂಡಿದ್ದ ಸ್ವಾತಂತ್ರ್ಯವನ್ನು ಮತ್ತೆ ಪಡೆದುಕೊಂಡೆ. ಇದು ಅತ್ಯಂತ ಕಷ್ಟದ ಪಯಣ. ಸಾಕಷ್ಟು ನಿರಾಸೆ, ಸಿಟ್ಟು, ಬೇಸರಗಳನ್ನು ಅನುಭವಿಸಿದೆ. ಈಗ ನಾನು ಸಾಗಿಬಂದ ಹಾದಿಯನ್ನು ಅವಲೋಕಿಸಿದರೆ, ಆ ಕಷ್ಟಗಳೇ ನನ್ನನ್ನು ಇನ್ನಷ್ಟು ಗಟ್ಟಿಗೊಳಿಸಲು ಮತ್ತು ನನ್ನನ್ನು ನಾನು ಇನ್ನಷ್ಟು ಪ್ರೀತಿಸಲು ಅವಕಾಶ ಮಾಡಿಕೊಟ್ಟವು ಎನಿಸುತ್ತದೆ.

ಇಂದು ಯಾವುದೇ ಅನುಮಾನವಿಲ್ಲದೆ ಹೇಳಬಲ್ಲೆ, ನನ್ನನ್ನು ನಾನು ಪ್ರೀತಿಸುತ್ತಿದ್ದೇನೆ, ಮಾನಸಿಕವಾಗಿ ಗಟ್ಟಿಯಾಗಿದ್ದೇನೆ. ಯಾವುದೇ ಅಪಘಾತ ಅಥವಾ ಆಘಾತಗಳು ನನ್ನ ಗಟ್ಟಿ ಮನಸ್ಸಿನ ಮೇಲೆ ಪರಿಣಾಮ ಬೀರುವಷ್ಟು ಶಕ್ತಿಯನ್ನು ಹೊಂದಿಲ್ಲ ಎಂದು ಧೈರ್ಯವಾಗಿ ಹೇಳಬಲ್ಲೆ. ಆ ಅಪಘಾತವು ನನ್ನ ಬದುಕಿನ ಕೆಲವು ವಿಚಾರಗಳನ್ನು ಕೊನೆ ಮಾಡಿತು. ಅದೇ ರೀತಿ ಅದು ಹಲವು ಹೊಸ ಮತ್ತು ಸುಂದರ ವಿಚಾರಗಳಿಗೆ ಮುನ್ನುಡಿಯನ್ನೂ ಬರೆಯಿತು. ■